**ಒ.ಎಸ್.ನಂ. 4/2020**
**PW-2**

**(ಇಂದು ದಿನಾಂಕಃ 10-08-2026 ರಂದು ಸಾಕ್ಷಿ ಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. BS ವಕೀಲರಿಂದಃ**

ವಾದಿ ಪ್ರತಿವಾದಿಯರು ಕೂಡಿ ಇರುವುದಿಲ್ಲ, ಬೇರೆ ಬೇರೆ ಇರುತ್ತಾರೆ. ನಾಗಮ್ಮಳಿಗೆ 4 ಜನ ಮಕ್ಕಳು ಅವರ ಹೆಸರು ಹೇಳಲು ಬರುವುದಿಲ್ಲ. ನಾಗಮ್ಮಳಿಗೆ ಮತ್ತು ಶಿವರಾಯನಿಗೆ ಹೊಂದಾಣಿಕೆ ಇರಲಿಲ್ಲ ಎಂದರೆ ಸರಿ. ಶಿವರಾಯನೇ 4 ಜನ ಮಕ್ಕಳ ಮದುವೆಯನ್ನು ಮಾಡಿರುತ್ತಾನೆ ಎಂದರೆ ಸರಿಯಲ್ಲ. ನಾಗಮ್ಮಳು ಮದುವೆ ಮಾಡಿರುತ್ತಾಳೆ. ನಾಗಮ್ಮಳಿಗೆ ಜೀವನಾಂಶಕ್ಕೆ ಹಣ ಇಲ್ಲದ ಕಾರಣ ಶಿವರಾಯ ವಿರುದ್ದ ಪ್ರಕರಣ ದಾಖಲಿಸಿದ ವಿಷಯ ನನಗೆ ಗೊತ್ತಿಲ್ಲ. ನಾಗಮ್ಮಳಿಗೆ ತನ್ನ ಜೀವನ ನಡೆಸಲು ಆರ್ಥಿಕ ಸ್ಥಿತಿ ಇಲ್ಲದ ಕಾರಣ ಅವಳು ತನ್ನ ಮಕ್ಕಳ ಮದುವೆಯನ್ನು ಮಾಡಿಲ್ಲ ಎಂದರೆ ಸರಿಯಲ್ಲ.

ಶಿವರಾಯ ತನ್ನ ಮಕ್ಕಳ ಮದುವೆ ಮಾಡಲು ಮಾಡಿದ ಸಾಲವನ್ನು ತೀರಿಸಲು ಮಾಣಿಕಪ್ಪ ಚಂದ್ರಂಪಳ್ಳಿ ರವರಿಗೆ ದಾವಾ ಆಸ್ತಿ (ಎ) ಸ.ನಂಬರ 42 ರ ಜಮೀನನ್ನು ಮಾರಾಟ ಮಾಡಿರುತ್ತಾನೆ ಎಂದರೆ ಸರಿಯಲ್ಲ. ಅವರಿಗೆ ಸಾಲ ಇರಲಿಲ್ಲ.

ಸಾಮಾನ್ಯವಾಗಿ ಕೌಟುಂಬಿಕ ಆರ್ಥಿಕ ಬಿಕ್ಕಟ್ಟಿನ ಸಲುವಾಗಿ ಜಮೀನನ್ನು ಮಾರಾಟ ಮಾಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಶಿವರಾಯನ ಗಂಡು ಮಕ್ಕಳು ಚಿಂಚೋಳಿ ತಾಲೂಕಿನಲ್ಲಿ ಪಾರ್ಲೆ ಜಿ ಬಿಸ್ಕೇಟ್ ಸರಬರಾಜು ಮಾಡಲು ಏಜೆನ್ಸಿಯನ್ನು ಪಡೆದಿದ್ದರು ಎಂದರೆ ಸರಿ. ನಂತರ ಅವರ ದುಡಿಮೆಯ ಹಣದಿಂದ ಮಾಣಿಕಪ್ಪ ಚಂದ್ರಂಪಳ್ಳಿ ರವರಿಗೆ ಮಾರಾಟ ಮಾಡಿದ ಆಸ್ತಿಯನ್ನು ಪುನಃ ಅವರಿಂದ ಕ್ರಯ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಆ ಜಮೀನನ್ನು ಆತನ ಮಕ್ಕಳು ಶಿವರಾಯನ ಹೆಸರಿಗೆ ನಾಮ ಮಾತ್ರಕ್ಕೆ ಆತನ ಹೆಸರಿನಲ್ಲಿ ಕ್ರಯ ಪಡೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಶಿವರಾಯ 1 ನೇ ಪ್ರತಿವಾದಿಗೆ ಜೀವನಾಂಶ ಕೊಡದ ಕಾರಣ ಒಂದು-ಎರಡು ಸಲ ಜೈಲಿಗೆ ಹೋಗಿರುತ್ತಾನೆ ಎಂದರೆ ಸರಿ. ಆ ಕಾರಣ ಜೈಲಿಗೆ ಹೋಗುವುದನ್ನು ತಪ್ಪಿ ಸಿಕೊಳ್ಳಲು 1 ಎಕರೆ 8 ಗುಂಟೆ ಜಮೀನನ್ನು 8 ನೇ ಪ್ರತಿವಾದಿಗೆ ಶಿವರಾಯ ಮಾರಾಟ ಮಾಡಿ ಆ ಹಣವನ್ನು 1 ನೇ ಪ್ರತಿವಾದಿಗೆ ಜೀವನ ಪರ್ಯಂತ ಜೀವನಾಂಶವನ್ನು ನೀಡಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ಅಂದಿನಿಂದ ಕ್ರಯ ಪಡೆದ 8 ನೇ ಪ್ರತಿವಾದಿ ಆ ಜಮೀನನ್ನು ಉಳುಮೆ ಮಾಡುತ್ತಾ ಇರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ಆ ಜಮೀನನ್ನು ಯಾರು ಉಳುಮೆ ಮಾಡುತ್ತಾರೆ ಎಂಬ ವಿಷಯ ನನಗಿಂತ ಈ ದಾವೆಯನ್ನು ದಾಖಲಿಸಿದವರಿಗೆ ಚೆನ್ನಾ ಗಿ ಗೊತ್ತು ಎಂದರೆ ಸರಿಯಲ್ಲ. ಊರಿನಲ್ಲಿ ನಾವು ಇರುತ್ತೇವೆ.

**ಒ.ಎಸ್.ನಂ. 4/2020**
**PW-2**

ದಾವಾ ಆಸ್ತಿಯು ಹಿರಿಯರ ಆಸ್ತಿ ಅಲ್ಲ ಎಂದರೆ ಸರಿಯಲ್ಲ. ನನಗೆ ಏನೂ ಗೊತ್ತಿಲ್ಲದಿದ್ದರೂ ಸಹ ವಾದಿಗೆ ಮತ್ತು ನಾಗಮ್ಮಳ ಮಕ್ಕಳಿಗೆ ಸಹಾಯ ಮಾಡಲು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,

ಮತ್ತು ಜೆ.ಎಮ್. ಎಫ್. ಸಿ, ಚಿಂಚೋಳಿ.